ಅಂಡರ್‌ಸ್ಟಾಂಡ್ ದಿ ಫ್ಯಾಮಿಲಿ ಸಿಚುಯೇಶನ್ಸ್' ಎಂದವನೇ ಡ್ರಾ ಎಳೆದು ಪುಟ್ಟ ಅಮೃತಾಂಜನದ ಡಬ್ಬಿ ತೆಗೆದಿಡುತ್ತಾನೆ. ಎಲ್ಲಿ ತಾನೇ ಹಣೆಗೆ ಮೆತ್ತಿಬಿಡುತ್ತಾನೋ ಎಂಬ ಭಯದಲ್ಲಿ, 'ಇದೆಲ್ಲಾ ಏಕೆ ಸಾರ್... ಒಂದು ಡೋಸ್ ಕಾಫಿ ಬಿದ್ದರೆ ತಾನಾಗಿಯೇ ಸರಿಹೋಗುತ್ತೆ ಬಿಡಿ' ಅನ್ನುವೆ. 'ತರಿಸೋಣಬಿಡ್ರಿ. ಮೊದ್ಲು ಕೂತ್ಕೊಳಿ ಪ್ಲೀಸ್. ತಗೋಳಿ... ಹಚ್ಕೊಳಿ' ಡಬ್ಬಿ ಒಡ್ಡುತ್ತಾನೆ. ಅನ್ಯಮನಸ್ಕಳಾಗಿ ಲೇಪಿಸಿಕೊಳ್ಳುತ್ತೇನೆ. 'ನೊನೊ ಹಾಗಲ್ಲ...' ತಾನೇ ಮುಂದೆ ಬಂದು ಮಸಾಜ್ ತರಾ ಹಣೆಯ ಮೇಲೆ ಕೈಆಡಿಸುವಾಗ ಅವನ ಕೈ ಎತ್ತಿ ಬಿಸಾಡುತ್ತೇನೆ. 'ಇಟ್ ಈಸ್ ಟೂ ಮಚ್ ಸಾರ್... ಐ ಕಾಂಟ್' ಒರಟಾಗುತ್ತೇನೆ. 'ಸಾರಿ' ಎಂದು ಹಿಂದೆ ಸರಿದು ತಲೆ ತಗ್ಗಿಸಿಬಿಡುತ್ತಾನೆ. 'ಹೀಗೆ ದಿನಾ ಎಷ್ಟು ಜನಕ್ಕೆ ಮಸಾಜ್ ಮಾಡ್ತಿರಾ? ಗಂಡಸರ ಬುದ್ಧಿ ನಂಗೊತ್ತಿಲ್ವಾ?' ನನಗೇ ಗೊತ್ತಿಲ್ಲದೆ ಅಸೂಯೆ ಹೆಡೆ ಎತ್ತುತ್ತದೆ. ತಗ್ಗಿಸಿದ ತಲೆ ಎತ್ತದ ಅವನು, 'ನನ್ನನ್ನು ಅಷ್ಟು ಚೀಪ್ ಆಗಿ ತಿಳಿಬೇಡಿ ರಂಜನಿ... ಪ್ಲೀಸ್' ತನ್ನೊಳಗೆ ತಾನೇ ಮಾತನಾಡಿಕೊಂಡಂತೆ ಆಡುವಾಗ ಕಮರಿಯಲ್ಲಿ ಬಿದ್ದವನಂತೆ ಸ್ವರ ಕ್ಷೀಣಿಸಿರುತ್ತದೆ. ಮೌನವಾಗಿ ಡಬ್ಬಿ ಬಿಸಾಡಿ ಹೊರಬಂದು ಬಿಡುತ್ತೇನೆ.

ಕ್ಯಾಂಟಿನ್‌ಗೆ ಊಟಕ್ಕೆ ಬಂದಾಗ ಅವನ ಮುಖ ಒಣಗಿದ ಸಿಪ್ಪೆ. 'ಯಾಕೆ ಸರ್ ಹೀಗಿದ್ದೀರಿ?' ಶ್ರೀಲಕ್ಷ್ಮಿ ಅವನ ಟೇಬಲ್‌ಗೇ ಹೋಗಿ ಮಸ್ಕಾ ಹೊಡೆಯುತ್ತಾಳೆ. ಅವಳಿಗಂತೂ ನಾಚಿಕೆಯೆಲ್ಲಾ ಊರಿಂದಾಚೆಗೆ. ಉಳಿದವರು ಮುಸಿಮುಸಿ ನಗುತ್ತಾರೆ. ಅವನೇನಂದನೋ ಕೇಳಿಸುವುದಿಲ್ಲ. ಇವಳು ದುಮುಗುಟ್ಟುತ್ತಾ ಹಿಂದಿರುಗುತ್ತಾಳೆ. ನನ್ನ ಮೇಲಿನ ಕೋಪ ಅವಳ ಮೇಲೆ ತೀರಿಸಿಕೊಂಡಿರಬಹುದೆಂದುಕೊಳ್ಳುವೆ. ಅವನು ತನ್ನ ಸ್ಟಾಫ್‌ನವರೊಡನೆ ಎಷ್ಟೇ ಸಲಿಗೆಯಿಂದಿದ್ದರೂ ಯಾರೂ ಅವನ ಟೇಬಲ್‌ಗೇ ಹೋಗಿ ಕೂರುವಷ್ಟು ಸದರ ತೋರಿದವರಿಲ್ಲವೆಂಬುದನ್ನು ನೆನೆವಾಗ ಮನಸ್ಸು ಅರಳಿತೇಕೋ! ಸಹಿಗೆ ಹೋದರೂ ಒಂದೆರಡು ದಿನ ನನ್ನತ್ತ ಅವನ ನೋಟವೂ ಇಲ್ಲ. ಮಾತೂ ಇಲ್ಲ. ಅವನನ್ನು ಸೋಲಿಸಿದೆನೆಂಬ ಅಹಂಭಾವ ಮೂಡಿದರೂ ಸೋಲಿಸಿದೆನೋ ಸೋತೆನೋ ಎಂಬ ಕೀಟ ತಲೆಯನ್ನು ಕೊರೆವಾಗ ಮನೆಯಲ್ಲಿನ ಅಮೃತಾಂಜನದ ಫುಲ್ ಬಾಟಲ್ ಖಾಲಿಯಾದರೂ ತಲೆನೋವು ಮಾತ್ರ ಕಾಯಂ. ಅವನು ಇನ್ನೂ ಎರಡು ದಿನ ಮಾತನಾಡಿಸದೆ ಮೊದಲಿನಂತೆ ಚಾಟ್ ಮಾಡದೆ ಕಾಡಿಸಿದರೆ ನನ್ನ ತಲೆ ಸಿಡಿದು ಸಹಸ್ರ ಹೋಳಾದೀತೆಂಬ ಭಯ ಕಾಡುತ್ತದೆ. ಅವನೇನೋ ನನ್ನನ್ನು ಕರೆಸಿಕೊಳ್ಳದೆ ಪೀವನ್‌ನಿಂದ ಪೇಪರ್ಸ್ ತರಿಸಿಕೊಂಡು ಸಹಿ ಹಾಕಿ ಕಳುಹಿಸುವಾಗ ಡಿಪ್ರೆಶನ್‌ಗೆ ಒಳಗಾಗುತ್ತಾನೆ. ಒಮ್ಮೆ ಎಲ್ಲರ ಟೇಬಲ್‌ಗೆ ಬಂದು ಚೆಕ್ ಮಾಡಿದರೂ ನನ್ನತ್ತ ಸುಳಿಯುವುದಿಲ್ಲ. 'ನಮ್ಮ ಸಾರ್‌ಗೆ ಒಂದಿಷ್ಟೂ ಇಗೋ ಇಲ್ರೆ. ಇಂತಹ ಬಾಸ್ ಸಿಕ್ಕದ್ದು ತಮ್ಮ ಪುಣ್ಯ ಅಲ್ವೇನ್ರೆ?' ಶ್ರೀಲಕ್ಷ್ಮಿ ಅವನಿಗೆ ಕೇಳಲೆಂದೇ ಜೋರಾಗಿ ದನಿ ತೆಗೆದು ಹೊಗಳಿ ಕುಲುಕುಲು ನಗುವಾಗ ಉಗಿಯಬೇಕೆನಿಸುತ್ತದೆ. ಅವಳತ್ತ ತಿರುಗಿಯೂ ನೋಡದೆ ಅವನು ಸರ್ರನೆ ನಡೆದು ಹೋದಾಗ ಅದೇಕೋ ಮಾತಿಗೆ ನಿಲುಕದ ನೆಮ್ಮದಿಯಪ್ಪ. ಮನೆಯಲ್ಲಿ ಸಿಗದ ನೆಮ್ಮದಿ, ಒಂಚೂರು ಹಿಗ್ಗು ಕಂಪೆನಿಗೆ ಬಂದಾಗ ಅವನಿಂದ ಆಗಾಗ 'ಕಡ' ಪಡೆದು ಜಡವಾಗಿದ್ದ ದೇಹದಲ್ಲಿ ಇಂಧನದಂತೆ ತುಂಬಿಸಿಕೊಂಡು ಚಾರ್ಜ್ ಆಗುತ್ತಿದ್ದ ನಾನೀಗ ಚಾರ್ಜ್‌ಗೆ ಇಡದ ಮೊಬೈಲ್. ದಿನಗಳು ಯುಗಗಳ ಲೆಕ್ಕದಲ್ಲಿ ಉರುಳುತ್ತವೆ. ಅವನೊಡನೆ ಮಾತನಾಡದಿದ್ದರೆ ಅಥವಾ ಅವನು ಮಾತನಾಡಿಸದೆ ಕಡೆಗಣಿಸಿದರೆ ನಾನು ನಾನಾಗಿರುವುದಿಲ್ಲವೆಂಬ ಟೆನ್ಶನ್‌ಗೆ ತುತ್ತಾಗುವೆ. ಮನೆಯಲ್ಲಿ ನಾನು ಜ್ವರ ಬಂದು ನರಳುತ್ತಾ ಬಿದ್ದಿದ್ದರೂ ಕೇಳುವವರಿಲ್ಲ. ಕೇಳಿದರೂ